ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com    e-mail : kundaprabha@gmail.com

A Model Daily Bulletin

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 28 ॥ ಸಂಚಿಕೆ : 15॥ UDP/1263/2018-20 || R.NO.50495/91 ॥ ತಾರೀಕು : 22–05–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/


Designer Silks now in Kundapura
ವಿನೂತನ ಪ್ರದರ್ಶನ ಮೇಳ
Date: 22 & 23 May 2018 Time: 10.00 - 08.00
Venue: Hotel Sharon, Shastri Circle, NH 66, Kundapura
KANCHI PURE • SOFT SILKS • FANCY SAREES
MUGA SILKS • ERI SILKS • BANARASI SILKS
Range starts from ₹800 - 20,000
*Conditions Apply
Aaradhya
Silks And More...
PLAMA CENTRE, BEJAI-KAPIKAD ROAD
MANGALURU. Cell: 82775 03592

# ಕರಾವಳಿಯಲ್ಲಿ ಸಿಡಿಲು, ಗಾಳಿಮಳೆ ಭೀತಿ

**ಚುನಾವಣೆ ಹಾಗೂ ಬಿಸಿಲಿನ ಉಷ್ಣತೆ ಕಡಿಮೆಯಾದೊಡನೆ ಈಗ ಮಳೆಗಾಳಿ ಸಿಡಿಲಿನ ಆರ್ಭಟ ಕರಾವಳಿಯ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಕಳೆದ ಎರಡು ತಿಂಗಳು ಚುನಾವಣೆಯ ಕಾವು ಏರುತ್ತಾ ಮೇ.15 ರಂದು ಕೊನೆಗೊಂಡರೆ, ಕಳೆದೆರಡು ತಿಂಗಳಿಂದ ಜನರನ್ನು ಕಾಡುತ್ತಿದ್ದ ಅತೀವ ಸೆಕೆಯು ಕಡಿಮೆಯಾಗಿ ಒಮ್ಮೆಲೆ ಗಾಳಿ ಮಳೆಯ ಆರ್ಭಟ ಜನರ ಗಮನವನ್ನು ತಮ್ಮ ಸ್ವಂತ ಕೆಲಸದತ್ತ ತಳ್ಳಿದೆ. ಶನಿವಾರವಂತೂ ರಾತ್ರಿ ಬೀಸಿದ ಸುಳಿಗಾಳಿ , ಸಿಡಿಲಿನ ಹೊಡೆತ ಜನರನ್ನು ತಲ್ಲಣಗೊಳಿಸಿತು. ಕರಾವಳಿಯಲ್ಲಿ ಜನ ಮುಂಗಾರುಮಳೆಗೆ ಮುನ್ನವೇ ಮಳೆಗಾಲದ ತಯಾರಿ ಆರಂಭಿಸುವಂತೆ ಎಚ್ಚರಿಕೆ ನೀಡಿದೆ.**







ಶನಿವಾರ ನಡುರಾತ್ರಿಯಿಂದ ಭಾನುವಾರ ಬೆಳಗ್ಗಿನ ಜಾವ ತನಕ ಅಬ್ಬರಿಸಿದ ಸಿಡಿಲು ಗುಡುಗು ಗಾಳಿ ಸಹಿತ ಭಾರಿ ಮಳೆಗೆ ಕುಂದಾಪುರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಪಾರ ಹಾನಿ ಸಂಭವಿಸಿದೆ. ಅಲ್ಲಲ್ಲಿ ಮರಮಟ್ಟುಗಳು ಉರುಳಿ ಬಿದ್ದಿವೆ. ಅನೇಕ ಮನೆಗಳು ಜಖಂಗೊಂಡಿವೆ. ಸಿಡಿಲು ಅಪ್ಪಳಿಸಿ ಮನೆ ಹಾನಿಗೊಂಡಿವೆ.

ಕಡಲತಡಿಯ ಕೋಡಿ ಪ್ರದೇಶ ಸಹಿತ ಶಿರೂರಿನಿಂದ ಕರಾವಳಿ ಪ್ರದೇಶದ ಜನ ಜೀವನ ಬಿರುಗಾಳಿ ಮಳೆ ಅಬ್ಬರಕ್ಕೆ ಸಂಪೂರ್ಣ ನಲುಗಿದೆ. ಕೋಡಿಯ ಚಂದು ಹೆಂಗ್ಸು ಎಂಬುವರ ಮನೆ ಮೇಲೆ ತೆಂಗಿನ ಮರ ಬಿದ್ದು ಇಡೀ ಮನೆ ಹಾನಿಗೀಡಾಗಿದೆ. 2.50 ಲಕ್ಷ ರೂ ಮೇಲ್ಪಟ್ಟು ನಷ್ಟ ಅಂದಾಜಿಸಲಾಗಿದೆ. ಕೋಡಿ ಬೈಲುಮನೆ ಯಶೋದಾ ಪೂಜಾರಿಯವರ ಮನೆ ಮೇಲೆ ಹಲಸಿನ ಮರಬಿದ್ದು ಮನೆ ಹಾನಿಗೊಂಡಿದೆ. ಸನಿಹದ ಗಿರಿಜಾ ಸೋಮ ಪೂಜಾರಿಯವರ ಮನೆ ಹಾನಿಗೊಂಡಿದ್ದು ತಲಾ 10 ಸಾವಿರ ನಷ್ಟ ಅಂದಾಜಿಸಲಾಗಿದೆ. ಸುಧಾಕರ ಪೂಜಾರಿ, ಚಿಕ್ಕಪೂಜಾರಿ, ಲಕ್ಷ್ಮಣ ಪೂಜಾರಿ, ನಾಗ ಪೂಜಾರಿ ಎಂಬುವರ ಮನೆಯೂ ಹಾನಿಗೊಂಡಿದ್ದು 60 ಸಾವಿರ ರೂ ನಷ್ಟ ಸಂಭವಿಸಿದೆ. ಕುಂಭಾಶಿಯಲ್ಲಿ ಭಾರಿ ಮರ ಉರುಳಿ ಮನೆಯ ಕಂಪೌಂಡ್ ಜಖಂಗೊಂಡಿದೆ.

**ಸಿಡಿಲು ಬಡಿದು ಮನೆ ಹಾನಿ:** ಬಳ್ಕೂರು ಗ್ರಾಮದ ಗೌರಿ ಪೂಜಾರ್ತಿ ಎಂಬುವರ ಮನೆಗೆ ಸಿಡಿಲು ಅಪ್ಪಳಿಸಿದ್ದು, ಇಡೀ ಮನೆ ಹಾನಿಗೊಂಡಿದೆ. ಮನೆಯಲ್ಲಿ 9 ಮಂದಿ ಸದಸ್ಯರಿದ್ದು, ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ.. ಸಿಡಿಲು ಅಪ್ಪಳಿಸುವಿಕೆಯಿಂದ ಮನೆಯ ವಯರಿಂಗ್ ಸುಟ್ಟುಹೋಗಿ ಬೆಂಕಿ ಕಾಣಿಸಿಕೊಂಡಿತ್ತು. ಮನೆಯ ಎಲ್ಲಾ ಎಲೆಕ್ಟ್ರಾನಿಕ್ಸ್ ಉಪಕರಣಗಳು ಸಂಪೂರ್ಣ ಸುಟ್ಟು ಹೋಗಿವೆ. 3.50 ಲಕ್ಷ ರೂ ಮೇಲ್ಪಟ್ಟು ನಷ್ಟ ಉಂಟಾಗಿದೆ.

**ಆಟದ ಮೈದಾನ ಜಲಾವೃತ:** ಮಳೆಯ ಅಬ್ಬರಕ್ಕೆ ಬಳ್ಕೂರು ಬೆನಕನಕಟ್ಟೆ ಆಟದ ಮೈದಾನ ,ಬೀಜಾಡಿ ಮೀನುಗಾರಿಕಾ ರಸ್ತೆ, ಹಾಗೂ ಬಹುತೇಕ ತಗ್ಗುಪ್ರದೇಶಗಳು ಜಲಾವೃತಗೊಂಡಿದೆ.

**ಮನೆಗಳಿಗೆ ಹಾನಿ, ಸ್ಕೂಟರ್ ಜಖಂ:** ಕುಂದಾಪುರ ಸಮೀಪದ ವಡೇರಹೋಬಳಿ ಬಿ.ಸಿ.ಲಕ್ಷ್ಮೀ ಎಂಬುವರ ಮನೆ ಮೇಲೆ ಮಾವಿನ ಮರ ಬಿದ್ದು ಮನೆ, ಶೆಡ್ ಜಖಂಗೊಂಡಿದೆ. ಮೇಲ್ಛಾವಣಿಯ ಹೆಂಚು ಹಾರಿಹೋಗಿದೆ. ಶೆಡ್‌ನಲ್ಲಿರಿಸಿದ್ದ ಸ್ಕೂಟರ್ ಜಖಂಗೊಂಡಿದೆ. 60 ಸಾವಿರ ರೂ ಮೇಲ್ಪಟ್ಟು ನಷ್ಟ ಉಂಟಾಗಿದೆ. ಮನೆಯ ಸದಸ್ಯರು ಅಪಾಯದಿಂದ ಪಾರಾಗಿದಾರೆ. ಇದೇ ಪರಿಸರದ ದುರ್ಗಿ ಎಂಬುವರ ಮನೆ ಮೇಲೆ ಮರ ಬಿದ್ದು ಮನೆ ಜಖಂಗೊಂಡಿದ್ದು, 60 ಸಾವಿರ ರೂ ನಷ್ಟ ಅಂದಾಜಿಸಲಾಗಿದೆ. ಬಿ.ಸಿ.ರಸ್ತೆಯ ಬೈಲು ಚಿಕ್ಕು ದೇವಸ್ಥಾನದ ಸಮೀಪದ ನಿವಾಸಿ ಕೆ.ಎನ್.ಮಾಧವ ಗಾಣಿಗ ಎಂಬುವರ ಮನೆ ಸಂಪೂರ್ಣವಾಗಿ ಹಾನಿಗೊಂಡಿದೆ. 70 ಸಾವಿರ ರೂ. ನಷ್ಟ ಸಂಭವಿಸಿದೆ. ಹಲವಾರು ದೂರು ಮನವಿಗಳು ತಾಲೂಕು ಕಚೇರಿಯನ್ನು ತಲುಪುತ್ತಿವೆ.

# ನಿಮಗೆಷ್ಟು ಮಾರ್ಕು?



ಇದೀಗ ತಾನೇ ಪರೀಕ್ಷೆಗಳು ಮುಗಿದು ಮಾರ್ಕುಗಳು ಸಿಗುವ ಕಾಲ. ಎಲ್ಲಾ ಪೇಪರುಗಳಲ್ಲೂ ಮಾರ್ಕುಗಳದ್ದೇ ಅಬ್ಬರ. ಅಷ್ಟು ಮಾರ್ಕು ಎಷ್ಟು ಮಾರ್ಕು ಎಂದು. ನಮಗೆ ಇಷ್ಟು ಮಾರ್ಕು ಎಂದು ನಮ್ಮ ಬೆನ್ನನ್ನು ನಾವೇ ತಟ್ಟಿಕೊಂಡು ಹೆಮ್ಮೆ ಪಡುವ ಕಾಲವಿದು. ನೂರರಲ್ಲಿ ನೂರು ಮಾರ್ಕು ಎಂದ ಕೂಡಲೇ ನನಗೆ ಒಂದೆಡೆ ಈಗಿನ ಮಕ್ಕಳು ಇಷ್ಟು ಬುದ್ಧಿವಂತರಾಗಿದ್ದಾರಲ್ಲಾ ಎಂದು ಸಂತಸವಾಗುತ್ತದೆ. ಹಾಗೆಯೇ ಇದು ಕಲಿಗಾಲ ಸ್ವಾಮೀ. ಎಲ್ಲವನ್ನೂ ನಂಬಿ ಅತೀ ಸಂತಸದಿಂದ ಕೆಡದಿರಿ. ಹಾಗೆಯೇ ಕಡಿಮೆ ಮಾರ್ಕು ಬಂದವರನ್ನು ಕಡೆಗಣಿಸದಿರಿ. ಏಕೆಂದರೆ ಮಾರ್ಕುಗಳೇ ಜೀವನವಲ್ಲ ಎಂಬ ಸತ್ಯವನ್ನು ತಿಳಿಯಿರಿ. ಅದಕ್ಕಾಗಿಯೇ ಈ ಮಾರ್ಕುಗಳ ಗುಟ್ಟನ್ನು ನಿಮಗೆ ಇಂದು ಹೇಳಲೇ ಬೇಕು ಎನಿಸುತ್ತಿದೆ. ಆ ಕತೆಯನ್ನು ನೀವೂ ಕೇಳಬೇಕು.

ಮೊನ್ನೆ ತಾನೇ ನಡೆದ ಘಟನೆ. ನನ್ನ 5 ವರ್ಷದ ಮೊಮ್ಮಗಳು ಯು.ಕೆ.ಜಿ. ಯ ಪರೀಕ್ಷೆ ಮುಗಿಸಿದವಳು. ಅವರಿಗೆಲ್ಲಾ ಕರೆದು ಮೊನ್ನೆ ಮಾರ್ಕುಗಳನ್ನು ಕೊಟ್ಟಿದ್ದರು. ಆ ದಿನ ಶಾಲೆಯಿಂದ ಬಂದವಳೇ ನನ್ನನ್ನು ನೋಡಿ ಗೋಳೋ ಎಂದು ಅತ್ತೇ ಬಿಟ್ಟಳು. ಎಲ್ಲಿ ಬಿದ್ದಳೋ. ಪೆಟ್ಟು ಮಾಡಿಕೊಂಡಳೋ ಎಂದು ನೋಡುತ್ತಿರಬೇಕಾದರೆ ಅವಳ ಅಮ್ಮ ಹೇಳಿದಳು. “ಅವಳಿಗೆ ನೂರರಲ್ಲಿ 2 1/2 ಮಾರ್ಕು ಕಡಿಮೆ ಬಂದಿದೆಯಂತೆ ಅದಕ್ಕೇ ಈ ರಂಪಾಟ” ಎಂದು.

(5ನೇ ಪುಟಕ್ಕೆ)

ಕುಂದಾಪುರದಲ್ಲಿ 5 ದಶಕಗಳಿಂದ ನಿರಂತರ ಸೇವೆಯಲ್ಲಿರುವ
ವಸಂತ ಬೇಕರಿ

ಗ್ರಾಹಕರ ಅನುಕೂಲತೆಗಾಗಿ ಅತ್ಯಂತ ಸುಸಜ್ಜಿತವಾಗಿ ಇನ್ನೊಂದು ನೂತನ ಮಾರಾಟ ಕೇಂದ್ರವನ್ನು ಪ್ರಾರಂಭಿಸಲಾಗಿದೆ.

ಕಾರ್ಪೋರೇಶನ್ ಬ್ಯಾಂಕ್ ಬಳಿ, ಮುಖ್ಯ ರಸ್ತೆ, ಕುಂದಾಪುರ
ಫೋನ್ : 08254–230503, ಮೊ: 9448171188


NR’s ನಂದಿನಿ
ಶಿವಪ್ರಸಾದ್ ಗ್ರ್ಯಾಂಡ್ – ಕುಂದಾಪುರ
ಗ್ರಾಹಕರಿಗೆ ಸಂತಸದ ಸುದ್ದಿ
ಕುಂದಾಪುರದ ಸುತ್ತಮುತ್ತಲಿನ ಗ್ರಾಮಗಳಿಗೆ
25 ರಿಂದ 500 ಜನರ ಸಸ್ಯಹಾರಿ ಊಟ, ಉಪಹಾರ
ತಲುಪಿಸುವ ವ್ಯವಸ್ಥೆ ಆರಂಭಿಸಲಾಗಿದೆ.
ವಿಚಾರಿಸಿರಿ:
ವೆಂಕಟರಮಣ ಉಪಾಧ್ಯಾಯ –ಪಾಲುದಾರರು
7013816818
ಉದಯ – ಮೆನೇಜರ್
7406921442
ಸೀತಾರಾಮ ಶಾಸ್ತ್ರಿ –ಕ್ಯಾಟರಿಂಗ್ ಹೆಡ್
9731196610